## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2021-22ನೇ ಸಾಲಿಗೆ ರಾಜ್ಯದಲ್ಲಿನ ಸರ್ಕಾರಿ, ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳ ವ್ಯಾಪ್ತಿಯ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳಲ್ಲಿನ ಸ್ನಾತಕ ಕೋರ್ಸುಗಳ ಸೀಟುಗಳ ಪ್ರವೇಶ ಶುಲ್ಕವನ್ನು ನಿಗಧಿಪಡಿಸುವ ಬಗ್ಗೆ.

**ಓದಲಾಗಿದೆ:** ರಾಜ್ಯ ಸರ್ಕಾರ ಹಾಗೂ ಕೆಪಿಸಿಎಫ್, ಕೆಆರ್‌ಎಲ್‌ಎಂಪಿಸಿಎ ಮತ್ತು ಎಎಂಪಿಸಿಕೆ ಒಕ್ಕೂಟದ ನಡುವೆ ಏರ್ಪಟ್ಟಿರುವ ಪರಸ್ಪರ ಒಡಂಬಡಿಕೆ ದಿ:19-01-2022.

*******

**ಪ್ರಸ್ತಾವನೆ:**

2021-22ನೇ ಸಾಲಿನ ಸ್ನಾತಕ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸುಗಳ ಸೀಟು ಹಂಚಿಕೆ ಮತ್ತು ಶುಲ್ಕ ನಿಗಧಿಗೆ ಸಂಬಂಧಿಸಿದಂತೆ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳುವ ಸಲುವಾಗಿ ರಾಜ್ಯದ ಖಾಸಗಿ ಕಾಲೇಜುಗಳ ಸಂಘಗಳಾದ ಕರ್ನಾಟಕ ಪ್ರೋಫೆಷನಲ್ ಕಾಲೇಜಸ್ ಫೌಂಡೇಷನ್(KPCF), ಕರ್ನಾಟಕ ರಿಲೀಜಿಯಸ್ ಮತ್ತು ಲಿಂಗ್ವಿಸ್ಟಿಕ್ ಮೈನಾರಿಟಿ ಪ್ರೋಫೆಷನಲ್ ಕಾಲೇಜಸ್ ಅಸೋಸಿಯೇಷನ್(KRLMPCA) ಮತ್ತು ಅಸೋಸಿಯೇಷನ್ ಆಫ್ ಮೈನಾರಿಟಿ ಪ್ರೋಫೆಷನಲ್ ಕಾಲೇಜಸ್ ಇನ್ ಕರ್ನಾಟಕ (AMPCK) ಮತ್ತು ಖಾಸಗಿ/ಡೀಮ್ಡ್ ವಿಶ್ವವಿದ್ಯಾಲಯದ ಅಧ್ಯಕ್ಷರು/ಪ್ರತಿನಿಧಿಗಳೊಂದಿಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:12-01-2022ರಂದು ನಡೆದ ಸಭೆಯಲ್ಲಿ 2021-22ನೇ ಸಾಲಿಗೆ ಸದರಿ ಸಂಘಗಳ ವ್ಯಾಪ್ತಿಯ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕ ಕೋರ್ಸುಗಳ ಸೀಟುಗಳಿಗೆ 2020-21ನೇ ಸಾಲಿನಲ್ಲಿ ನಿಗಧಿಪಡಿಸಿದ್ದ ಸರ್ಕಾರಿ ಕೋಟಾದ ಸೀಟುಗಳಿಗೆ ಪ್ರವೇಶ ಶುಲ್ಕದಲ್ಲಿ ಯಾವುದೇ ಬದಲಾವಣೆ ಮಾಡದೇ ಪರಸ್ಪರ ಒಡಂಬಡಿಕೆಗಳನ್ನು ಮಾಡಿಕೊಳ್ಳಲಾಗಿದೆ.

ಸರ್ಕಾರಿ/ಅನುದಾನರಹಿತ ಖಾಸಗಿ ವೈದ್ಯಕೀಯ/ದಂತ ವೈದ್ಯಕೀಯ ಕಾಲೇಜುಗಳಲ್ಲಿನ ಎಲ್ಲಾ ಸ್ನಾತಕ ಕೋರ್ಸಿನ ಸೀಟುಗಳಿಗೂ ಹಾಗೂ ಖಾಸಗಿ ವಿಶ್ವವಿದ್ಯಾಲಯಗಳು/ಡೀಮ್ಡ್ ವಿಶ್ವವಿದ್ಯಾಲಯಗಳು ಸಂಬಂಧಿತ ಕಾಯ್ದೆಗಳು/ಮುಚ್ಚಳಿಕೆ ಮತ್ತು ಒಪ್ಪಂದ ಪತ್ರಗಳನ್ವಯ ಸರ್ಕಾರಕ್ಕೆ ಬಿಟ್ಟುಕೊಡುವ ಸೀಟುಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕವೇ 2021-22ನೇ ಸಾಲಿಗೆ ಕೌನ್ಸಿಲಿಂಗ್ ಮೂಲಕ ಸೀಟು ಹಂಚಿಕೆ ಮಾಡಲು ನಿರ್ಣಯಿಸಲಾಯಿತು.

ಅದರಂತೆ ರಾಜ್ಯದಲ್ಲಿನ ಖಾಸಗಿ ವೈದ್ಯಕೀಯ/ದಂತ ವೈದ್ಯಕೀಯ ಕಾಲೇಜುಗಳಲ್ಲಿನ(KPCF/KRLMPCA/AMPCK) ವೈದ್ಯಕೀಯ (ಎಂಬಿಬಿಎಸ್)/ದಂತ ವೈದ್ಯಕೀಯ(ಬಿಡಿಎಸ್) ಸೀಟುಗಳಿಗೆ ಪಾವತಿಸಬೇಕಾದ ಶುಲ್ಕವನ್ನು ಈ ಕೆಳಕಂಡಂತೆ ನಿಗಧಿಪಡಿಸಲು ನಿರ್ಣಯಿಸಲಾಯಿತು.

ರೂ.ಗಳಲ್ಲಿ

| ಸಂಖ್ಯೆ | ಕೋರ್ಸುಗಳ ವಿವರ | KPCF/KRLMPCA/AMPCK ಅಭ್ಯರ್ಥಿಗಳಿಗೆ | | ಕೆಇಎ ಮೂಲಕ ಸರ್ಕಾರಿ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳಿಗೆ | |
|---|---|---|---|---|---|
| | | ಹಿಂದಿನ ಸಾಲಿನ ಶುಲ್ಕ (2020-21) | ಪ್ರಸ್ತುತ ಸಾಲಿನ ಶುಲ್ಕ (2021-22) | ಹಿಂದಿನ ಸಾಲಿನ ಶುಲ್ಕ (2020-21) | ಪ್ರಸ್ತುತ ಸಾಲಿನ ಶುಲ್ಕ (2021-22) |
| 1 | ಎಂಬಿಬಿಎಸ್ | ರೂ.9,81,956/- | ರೂ.9,81,956/- | ರೂ.1,28,746/- | ರೂ.1,28,746/- |
| 2 | ಬಿಡಿಎಸ್ | ರೂ.6,66,023/- | ರೂ.6,66,023/- | ರೂ.83,358/- | ರೂ.83,358/- |

ಮುಂದುವರೆದು, KPCF/KRLMPCA/AMPCK ವ್ಯಾಪ್ತಿಯ ಕಾಲೇಜುಗಳಲ್ಲಿನ ಸ್ನಾತಕ ಕೋರ್ಸುಗಳ ಸೀಟುಗಳ ಪ್ರವೇಶ ಶುಲ್ಕವನ್ನು ನಿಗಧಿಪಡಿಸಲಾಗಿದೆಯೋ ಅದೇ ಶುಲ್ಕವನ್ನು ಖಾಸಗಿ/ಡೀಮ್ಡ್ ವಿಶ್ವವಿದ್ಯಾಲಯಗಳ ವ್ಯಾಪ್ತಿಯ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸ್ನಾತಕ ಸೀಟುಗಳಿಗೂ ನಿಗಧಿಪಡಿಸಲು ನಿರ್ಣಯ ಕೈಗೊಳ್ಳಲಾಗಿದೆ.

ಮುಂದುವರೆದು, ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಬೆಂಗಳೂರು ಸಂಸ್ಥೆಯು ಸಲ್ಲಿಸಿರುವ ಕೋರಿಕೆಯನ್ನು ಪರಿಗಣಿಸಲಾಯಿತು. ಸದರಿಯವರೊಂದಿಗೆ ಸರ್ಕಾರದ ಯಾವುದೇ ಒಡಂಬಡಿಕೆ ಇಲ್ಲದೇ ಇರುವುದರಿಂದ ಮತ್ತು ಎಂಸಿಐ ನಿಯಮಾವಳಿಯನುಸಾರ ಪ್ರತೀ ಸೀಟನ್ನು ಸರ್ಕಾರದ ಅಧಿಸೂಚಿತ ಸಂಸ್ಥೆಯು ಕೌನ್ಸಿಲಿಂಗ್ ಪ್ರಕ್ರಿಯೆ ಅನುಸಾರ ಹಂಚಿಕೆಯನ್ನು ನಿಯಮಾನುಸಾರ ಮಾಡಬೇಕಾಗಿರುವುದರಿಂದ ಶುಲ್ಕಗಳ ಬಗ್ಗೆ ಸಂಸ್ಥೆಯು ನಿರ್ಧರಿಸಿರುವಂತೆ ಅಧಿಸೂಚಿಸಲು ತಿಳಿಸಲಾಯಿತು. ಖಾಸಗಿ ವಿಶ್ವವಿದ್ಯಾಲಯವು ಸಹ ಸರ್ಕಾರಿ ಕೋಟಾ ಹೊರತುಪಡಿಸಿ, ಉಳಿದಂತೆ ಸಂಸ್ಥೆಗಳು ಈ ಕೆಳಗಿನಂತೆ ಶುಲ್ಕ ವಿವರಗಳು ತಿಳಿಸಿರುತ್ತಾರೆ.

**ರೂ.ಗಳಲ್ಲಿ**

| ಸಂಖ್ಯೆ | ಸಂಸ್ಥೆಯ ಹೆಸರು | ಸರ್ಕಾರಿ ಕೋಟಾ ಸೀಟುಗಳಿಗೆ | ಖಾಸಗಿ ಕೋಟಾ ಸೀಟುಗಳಿಗೆ | ಎನ್‌ಆರ್‌ಐ ಕೋಟಾ ಸೀಟುಗಳಿಗೆ | ಇತರೆ ಕೋಟಾ ಸೀಟುಗಳಿಗೆ |
|---|---|---|---|---|---|
| 1 | ಸೇಂಟ್ ಜಾನ್ಸ್, ಬೆಂಗಳೂರು | - | ರೂ.6,73,930/- | - | - |
| 2 | ಎಐಎಂಎಸ್, ಬಾಲಗಂಗಾಧರನಾಥ ನಗರ, ನಾಗಮಂಗಲ, ಮಂಡ್ಯ. | ರೂ.1,28,746/- | ರೂ.18,00,000/- | ರೂ.34,00,000/- | ರೂ.34,00,000/- |
| 3 | ಎಸ್‌ಡಿಎಂ, ಧಾರವಾಡ | | ರೂ.17,29,700/- | ರೂ.32,25,000/- | ರೂ.32,25,000/- |
| 4 | ಕೆಬಿಎನ್, ಕಲಬುರಗಿ | | ರೂ.16,14,965/- | ರೂ.32,00,000/- | ರೂ.30,00,000/- |
| 5 | ಸಿಡಿಎಸ್‌ಎನ್‌ಇಆರ್, ಬೆಂಗಳೂರು. | | ರೂ.20,00,000/- | ರೂ.32,00,000/- | ರೂ.32,00,000/- |

**ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 94 ಆರ್‌ಜಿಯು 2021, ದಿನಾಂಕ:21-01-2022.**

ಸರ್ಕಾರಿ ಸ್ವಾಯತ್ತ ವೈದ್ಯಕೀಯ/ದಂತ ವೈದ್ಯಕೀಯ ಕಾಲೇಜುಗಳಲ್ಲಿನ ಸ್ನಾತಕ ಕೋರ್ಸುಗಳ ಸೀಟುಗಳಿಗೆ 2021-22ನೇ ಸಾಲಿನ ಕೆಳಕಂಡಂತೆ ಶುಲ್ಕವನ್ನು ನಿಗಧಿಪಡಿಸಲಾಗಿದೆ.

| ಕ್ರ.ಸಂ | ಸ್ನಾತಕ ಕೋರ್ಸುಗಳ ವಿವರ | ನಿಗಧಿಪಡಿಸಿದ ಶುಲ್ಕ (ರೂ.ಗಳಲ್ಲಿ) |
|---|---|---|
| 1 | ಎಂಬಿಬಿಎಸ್ | ರೂ.50,000/- |
| 2 | ಬಿಡಿಎಸ್ | ರೂ.40,000/- |

ರಾಜ್ಯದಲ್ಲಿನ ಖಾಸಗಿ ವೈದ್ಯಕೀಯ/ದಂತ ವೈದ್ಯಕೀಯ ಕಾಲೇಜುಗಳಲ್ಲಿನ (KPCF/KRLMPCA/AMPCK) ವೈದ್ಯಕೀಯ (ಎಂಬಿಬಿಎಸ್)/ದಂತ ವೈದ್ಯಕೀಯ(ಬಿಡಿಎಸ್) ಸೀಟುಗಳಿಗೆ ಪಾವತಿಸಬೇಕಾದ 2021-22ನೇ ಸಾಲಿನ ಶುಲ್ಕದ ವಿವರ:

**ರೂ.ಗಳಲ್ಲಿ**

| ಸಂಖ್ಯೆ | ಕೋರ್ಸುಗಳ ವಿವರ | KPCF/KRLMPCA/AMPCK ಅಭ್ಯರ್ಥಿಗಳಿಗೆ | | ಸರ್ಕಾರಿ ಕೋಟಾ | |
|---|---|---|---|---|---|
| | | ಹಿಂದಿನ ಸಾಲಿನ ಶುಲ್ಕ (2020-21) | ಪ್ರಸ್ತುತ ಸಾಲಿನ ಶುಲ್ಕ (2021-22) | ಹಿಂದಿನ ಸಾಲಿನ ಶುಲ್ಕ (2020-21) | ಪ್ರಸ್ತುತ ಸಾಲಿನ ಶುಲ್ಕ (2021-22) |
| 1 | ಎಂಬಿಬಿಎಸ್ | ರೂ.9,81,956/- | ರೂ.9,81,956/- | ರೂ.1,28,746/- | ರೂ.1,28,746/- |
| 2 | ಬಿಡಿಎಸ್ | ರೂ.6,66,023/- | ರೂ.6,66,023/- | ರೂ.83,358/- | ರೂ.83,358/- |

KPCF/KRLMPCA/AMPCK ವ್ಯಾಪ್ತಿಯ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದಡಿ ಸ್ನಾತಕ ಕೋರ್ಸುಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಮೇಲಿನಂತೆ ನಿಗಧಿಪಡಿಸಿರುವ ಶುಲ್ಕವನ್ನೇ ಖಾಸಗಿ/ಡೀಮ್ಡ್ ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದ ಸೀಟುಗಳಿಗೂ ನಿಗಧಿಪಡಿಸಿದೆ.

ಮುಂದುವರೆದು, ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು ಹಾಗೂ ಖಾಸಗಿ ವಿಶ್ವವಿದ್ಯಾಲಯಗಳು ನಿರ್ಧರಿಸಿರುವಂತೆ ಪ್ರವೇಶ ಶುಲ್ಕವನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

ರೂ.ಗಳಲ್ಲಿ

| ಸಂಖ್ಯೆ | ಸಂಸ್ಥೆಯ ಹೆಸರು | ಸರ್ಕಾರಿ ಕೋಟಾ ಸೀಟುಗಳಿಗೆ | ಖಾಸಗಿ ಕೋಟಾ ಸೀಟುಗಳಿಗೆ | ಎನ್ಆರ್ಐ ಕೋಟಾ ಸೀಟುಗಳಿಗೆ | ಇತರೆ ಕೋಟಾ ಸೀಟುಗಳಿಗೆ |
|---|---|---|---|---|---|
| 1 | ಸೇಂಟ್ ಜಾನ್ಸ್, ಬೆಂಗಳೂರು | - | ರೂ.6,73,930/- | - | - |
| 2 | ಎಐಎಂಎಸ್, ಬಾಲಗಂಗಾಧರನಾಥ ನಗರ, ನಾಗಮಂಗಲ, ಮಂಡ್ಯ. | ರೂ.1,28,746/- | ರೂ.18,00,000/- | ರೂ.34,00,000/- | ರೂ.34,00,000/- |
| 3 | ಎಸ್‌ಡಿಎಂ, ಧಾರವಾಡ | | ರೂ.17,29,700/- | ರೂ.32,25,000/- | ರೂ.32,25,000/- |
| 4 | ಕೆಬಿಎನ್, ಕಲಬುರಗಿ | | ರೂ.16,14,965/- | ರೂ.32,00,000/- | ರೂ.30,00,000/- |
| 5 | ಸಿಡಿಎಸ್ಎನ್ಐಆರ್, ಬೆಂಗಳೂರು. | | ರೂ.20,00,000/- | ರೂ.32,00,000/- | ರೂ.32,00,000/- |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
21/1/22

**(ಎ.ಶ್ರೀನಿಧಿ)**
ಸರ್ಕಾರದ ಅಧೀನ ಕಾರ್ಯದರ್ಶಿ-3,
**ವೈದ್ಯಕೀಯ ಶಿಕ್ಷಣ ಇಲಾಖೆ.**
21.01.2022

**ಇವರಿಗೆ:**

ಸಂಲಕನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಪ್ರತಿಗಳನ್ನು ಒದಗಿಸುವಂತೆ ಕೋರಿದೆ.

**ಪ್ರತಿಯನ್ನು:**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ), ಕರ್ನಾಟಕ, ಹೊಸಕಟ್ಟಡ, "ಆಡಿಟ್ ಭವನ", ಅಂಚೆಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು -560001.
2. ಪ್ರಧಾನ ಮಹಾಲೇಖಪಾಲರು (ಜಿ&ಇ&ಆರ್ಎಸ್ಎ), ಕರ್ನಾಟಕ, ಹೊಸಕಟ್ಟಡ, "ಆಡಿಟ್ ಭವನ", ಅಂಚೆಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು -560001.
3. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ರಸ್ತೆ, ಅಂಚೆಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001.
4. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು-21.

5. ಕಾರ್ಯನಿರ್ವಾಹಕ ನಿರ್ದೇಶಕರು/ಆಡಳಿತಾಧಿಕಾರಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ-560012.
6. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು-560 009.
7. ಅಧ್ಯಕ್ಷರು/ಕಾರ್ಯದರ್ಶಿ, ಕೆ.ಪಿ.ಸಿ.ಎಫ್. ನಂ.132, 2ನೇ ಮಹಡಿ, 17ನೇ ಅಡ್ಡರಸ್ತೆ, 11ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು.
8. ಅಧ್ಯಕ್ಷರು/ಕಾರ್ಯದರ್ಶಿ, ಕೆ.ಆರ್.ಎಲ್.ಎಂ.ಪಿ.ಸಿ.ಎ. ನಂ.143, ಸೂರ್ಯಮುಖಿ ಗಾರ್ಡನ್ ಅಪಾರ್ಟ್‌ಮೆಂಟ್ ನಂ.21, ವಿಠಲ್ ಮಲ್ಯ ರಸ್ತೆ, ಬೆಂಗಳೂರು-01.
9. ಅಧ್ಯಕ್ಷರು/ಕಾರ್ಯದರ್ಶಿ, ಎ.ಎಂ.ಪಿ.ಸಿ.ಕೆ., ಯೂನಿಟ್ ನಂ.2015, ಲಕ್ಷ್ಮೀ ಅಪಾರ್ಟ್‌ಮೆಂಟ್, ನಂ.06, ಕಾರ್ನವೆಲ್ ರಸ್ತೆ, ಲ್ಯಾಂಗ್ ಫೋರ್ಡ್ ರಸ್ತೆ, ರಿಚ್ ಮಂಡ್ ಟೌನ್, ಬೆಂಗಳೂರು-25.
10. ಸಂಬಂಧಿಸಿದ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಿಗೆ (ವೈದ್ಯಕೀಯ ಶಿಕ್ಷಣ ನಿರ್ದೇಶಕರ ಮುಖಾಂತರ)

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿವರ ಆಪ್ತ ಸಹಾಯಕ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.